



# ಬಾಲಿವುಡ್ ಪದ ಅಳಿಸಿಹಾಕಿ

■ ವಿಶಾಖ ಎನ್.

'ಬಾಲಿವುಡ್'—ಈ ರೀತಿಯ ಬಳಕೆಯನ್ನು ಹಲವರು ವಿರೋಧಿಸುತ್ತಾ ಬಂದಿದ್ದಾರೆ. ಹಿರಿಯ ಚಿತ್ರಕಥಾ ಲೇಖಕ, ಚಿತ್ರಸಾಹಿತಿ ಜಾವೇದ್ ಅಖ್ತರ್ ಅವರೂ ಸಂದರ್ಭೋಚಿತವಾಗಿ ಇದನ್ನೇ ಪ್ರತಿಪಾದಿಸುವವರು. ಚೆನ್ನೈನಲ್ಲಿ ಇತ್ತೀಚೆಗೆ ನಡೆದ ವಿಚಾರಸಂಕಿರಣವೊಂದರಲ್ಲಿ ಟ್ರೆಂಡ್ ಸೆಟರ್ ನಿರ್ದೇಶಕ ಎನಿಸಿಕೊಂಡಿರುವ ಮಣಿರತ್ನಂ ಕೂಡ ಇದೇ ಮಾತನ್ನು ಒತ್ತಿ ಹೇಳಿದರು.

'ಹಿಂದಿ ಚಿತ್ರರಂಗದವರೇ ಬಾಲಿವುಡ್ ಎಂದು ಬಳಸುವುದನ್ನು ಬಿಡಬೇಕು. ಆಗ ಬೇರೆಯವರೂ ಅದರ ಅನುಕರಣೆಯನ್ನು ಬಿಟ್ಟುಬಿಡುತ್ತಾರೆ. ಬಾಲಿವುಡ್ ಎನ್ನುವುದಕ್ಕೆ ಏನಾದರೂ ಪರ್ಯಾಯ ಬೇಕಾದರೆ ಹುಡುಕಲಿ. ಕಾಲಿವುಡ್, ಬಾಲಿವುಡ್ ಈ ರೀತಿ ಚಿತ್ರರಂಗಗಳನ್ನು ಕರೆಯುವುದು ಅಷ್ಟಾಗಿ ಸರಿಕಾಣುವುದಿಲ್ಲ' ಎಂದು ಅವರು ನೇರವಾಗಿ ಹೇಳಿದರು. ಅವರು ತಮ್ಮ ಪ್ರತಿಪಾದನೆಗೆ ಅಡಿಗೆರೆ ಎಳೆಯಲು 'ರಿಟೈರ್ ಬಾಲಿವುಡ್' ಎಂಬ ನುಡಿಗಟ್ಟನ್ನು ಬಳಸಿದರು.

ವಿಚಾರಸಂಕಿರಣದಲ್ಲಿ ಬರೀ ಮಣಿರತ್ನಂ ಒಬ್ಬರಿಂದ ಈ ಅಭಿಪ್ರಾಯ ಹೊಮ್ಮಲಿಲ್ಲ. ತಮಿಳಿನ ಪ್ರಯೋಗಶೀಲ ನಿರ್ದೇಶಕ ವೆಟ್ರಿಮಾರನ್ ಕೂಡ ಇದನ್ನೇ ಹೇಳಿದರು. 'ನಾವು ದೇಶದ ಸಿನಿಮಾ ಎಂದು ಯಾವುದೇ ಭಾಷೆಯ ಚಲನಚಿತ್ರಗಳನ್ನು ಪರಿಭಾವಿಸಬೇಕು. ಅದು ಬಿಟ್ಟು ಆ ವುಡ್, ಈ ವುಡ್ ಎಂದು ಹೇಳುತ್ತಾ ಸಿನಿಮಾಗಳ ವ್ಯಾಪಕತೆಯನ್ನು ಕುಗ್ಗಿಸುವುದು ಸರಿಯಲ್ಲ' ಎಂಬ ಧಾಟಿಯಲ್ಲಿ ವೆಟ್ರಿಮಾರನ್ ಮಾತನಾಡಿದರು.

ಅದೇ ವಿಚಾರಸಂಕಿರಣದಲ್ಲಿ ಇದ್ದ, ಕನ್ನಡದ ನಟ–ನಿರ್ದೇಶಕ ರಕ್ಷಿತ್ ಶೆಟ್ಟಿ ಅವರು 'ವುಡ್'ಗಳ ವಿಷಯಕ್ಕೆ ಹೋಗಲಿಲ್ಲ. ಪ್ರಚಾರದ ಸೂಕ್ಷ್ಮಗಳ ಕುರಿತು ಅವರು ವಿಚಾರ ಮಂಡಿಸಿದರು. ಸ್ಥಳೀಯ ಮಟ್ಟದಲ್ಲಿ ಬೇರೆ ಬೇರೆ ಭಾಷೆಗಳ ಸಿನಿಮಾಗಳನ್ನು ಆನ್‌ಲೈನ್ ಹಾಗೂ ಆಫ್‌ಲೈನ್ ಎರಡೂ ದಾರಿಗಳಲ್ಲಿ ಉತ್ತಮ ರೀತಿಯಲ್ಲಿ ಪ್ರಚಾರ ಮಾಡಬೇಕಿದೆ ಎನ್ನುವುದರ ಬಗೆಗೆ ಅವರು ವಿಷಯ ಮಂಡಿಸಿದರು.

ಮಣಿರತ್ನಂ ಅವರು 'ಪೊನ್ನಿಯಿನ್ ಸೆಲ್ವನ್ 2' ಸಿನಿಮಾದ ಪ್ರಚಾರದಲ್ಲಿ ತೊಡಗಿದ್ದು, ಅವಕಾಶ ಸಿಕ್ಕ ವೇದಿಕೆಗಳನ್ನೆಲ್ಲ ಅದಕ್ಕೂ ಬಳಸಿಕೊಳ್ಳುತ್ತಿದ್ದಾರೆ. ಹಿಂದಿ ಸಿನಿಮಾ ರಂಗದವರು 'ಬಾಲಿವುಡ್' ಎಂದೇ ವಿವಿಧ ದೇಶಗಳಲ್ಲೂ ಪ್ರಚಾರ ಮಾಡಿ, ಅದನ್ನೇ ಒಂದು ನುಡಿಗಟ್ಟಾಗಿಸಿರುವುದನ್ನು ಸರಿಯಲ್ಲ ಎಂದು ಅವರು ವರ್ಷಗಳಿಂದಲೂ ಹೇಳುತ್ತಾ ಬಂದಿದ್ದಾರೆ. ■

## ಜಗಪತಿ ಬಾಬು ಗೆಟಪ್ ಬದಲಿಸಿದ ಸಲ್ಮಾನ್

ಸಲ್ಮಾನ್ ಖಾನ್ ತಮ್ಮ ಇರಾದೆಯನ್ನೂ, ಇಶಾರೆಯನ್ನೂ ಫಲಪ್ರದವಾಗಿಸಿಕೊಳ್ಳುವಲ್ಲಿ ನಿಸ್ಸೀಮರು. 'ಬಜರಂಗಿ ಭಾಯಿಜಾನ್' ಸಿನಿಮಾ ಆದಾಗ, ಅದರ ಚಿತ್ರಕಥೆ ಇಷ್ಟಪಟ್ಟೊಡನೆ ಅವರು ತಾವು ಹೇಳಿದ ನಿರ್ದೇಶಕರಿಂದಲೇ ಆಕ್ಷನ್, ಕಟ್ ಹೇಳಿಸಬೇಕು ಎಂಬ ಷರತ್ತು ಹಾಕಿದ್ದರು. ಅದು ಅನುಷ್ಠಾನಕ್ಕೆ ಬಂದದ್ದೂ ಇತಿಹಾಸ.

'ಕಿಸಿ ಕಾ ಭಾಯಿ ಕಿಸಿ ಕೀ ಜಾನ್' ಎಂಬ ಅವರ ಹೊಸ ಚಿತ್ರದಲ್ಲಿ ತೆಲುಗು ನಟ ಜಗಪತಿ ಬಾಬು ಅವರನ್ನೂ ಸಲ್ಮಾನ್ ಬದಲಿಸಿದ್ದಾರೆ. ಅದು ಕೂಡ ಆಸಕ್ತಿಕರ ವಿದ್ಯಮಾನ. ಜಗಪತಿ ಬಾಬು ತಮ್ಮ ಹುರಿ ಮೀಸೆ, ಬೆಳ್ಳಿ ಕೂದಲಿನಿಂದಾಗಿಯೇ ಖಳನ ಪಾತ್ರಕ್ಕೂ ಮೆರುಗು ತಂದವರು. ಅವರು ಕೂದಲಿಗೆ ಕಪ್ಪು ಬಣ್ಣ ಹಾಕಲು ಇಷ್ಟಪಡುವವರಲ್ಲ. ಸಲ್ಮಾನ್ ಖಾನ್ ಸಿನಿಮಾ ಚಿತ್ರೀಕರಣಕ್ಕೆ ಹೋದಾಗಲೂ ಅವರು ತಮ್ಮ ಸಹಜ ಮುಖ ಚಹರೆ ಉಳಿಸಿಕೊಳ್ಳುವ ಬಯಕೆಯನ್ನೇ ಇಟ್ಟುಕೊಂಡಿದ್ದರು. ಅವರನ್ನು ನೋಡಿದ ಸಲ್ಮಾನ್, ಕೂದಲಿಗೆ ಬಣ್ಣ ಹಾಕುವಂತೆ ಸಲಹೆ ಇತ್ತರು. ಜಗಪತಿ ಬಾಬು ಸುಮ್ಮನೆ ಒಪ್ಪಿಕೊಳ್ಳದೆ, ಅದು ಯಾಕೆ ಅಗತ್ಯ ಎಂದು ಪ್ರಶ್ನಿಸಿದರು.

ಸಲ್ಮಾನ್ ತಮ್ಮ ಉದ್ದೇಶವನ್ನು ವ್ಯಕ್ತಪಡಿಸಿದ್ದು ಹೀಗೆ: 'ನಾನು ಖಳನಿಗೆ ಹೊಡೆಯುತ್ತೇನೆ. ಖಳ ಕೂಡ ನನಗೆ ಹೊಡೆಯುವ ಯತ್ನ ಮಾಡುತ್ತಾನೆ. ನೋಡುಗರಿಗೆ ಈ ಹೊಡೆದಾಟ ಸಹಜ ಎನ್ನಿಸಬೇಕು. ಬಿಳಿ ಕೂದಲಿನ, ಮಾಗಿದ ಮನುಷ್ಯನ ಮೇಲೆ ನಾನು ದಾಳಿ ಇಡುತ್ತಿದ್ದೇನೆ ಎಂದು ಭಾವಿಸಿದರೆ ನಮ್ಮ ಸಿನಿಮಾ ತಂತ್ರವೇ ಕೈಕೊಡುತ್ತದೆ. ಹೀಗಾಗಿ ನೀವು ನನ್ನ ವಯೋಮಾನದವರಂತೆಯೇ ಕಂಡರೆ ತೆರೆಮೇಲೆ ದೃಶ್ಯ ಚೆನ್ನಾಗಿ ಮೂಡುತ್ತದೆ.'

ಸಲ್ಮಾನ್ ಮಾತನ್ನು ಒಪ್ಪಿ, ಜಗಪತಿ ಬಾಬು ಮೇಕ್ ಓವರ್‌ಗೆ ಒಳಗಾದರು. ಆ ಸಿನಿಮಾ ಕೂಡ ಬಿಡುಗಡೆಯಾಗಿದೆ. ■

